ದಿ: 30-01-2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀಮತಿ ಸಿ.ಪಿ.ಎ., ವಕೀಲರಿಂದ ಆರೋಪಿತರ ಪರವಾಗಿ**:

3. ಶಿರಮೆಗೊಂಡನಹಳ್ಳಿ ಪಿ.ಡಿ.ಓ. ರವರಿಗೆ ನಾನು ಹೇಳಿ ಕಳುಹಿಸಿದಾಗ ಬೆಳಿಗ್ಗೆ 9.30 ಗಂಟೆಗೆ ಆಗಿತ್ತು. ಪತ್ರಾಂಕಿತ ಅಧಿಕಾರಿಗಳು ನಮ್ಮ ಠಾಣೆಗೆ ಹಾಜರಾದಾಗ ಬೆಳಿಗ್ಗೆ 10.00 ಗಂಟೆ ಆಗಿತ್ತು. ಸ್ಥಳಕ್ಕೆ ನಾವು ತಲುಪಿದಾಗ ಬೆಳಿಗ್ಗೆ 10.30 ಗಂಟೆ ಆಗಿತ್ತು. ನನಗೆ ಮಾಹಿತಿ ಬಂದ ಸ್ಥಳಕ್ಕೆ ಸುಮಾರು 2 ಗಂಟೆ ತಡವಾಗಿ ಅಲ್ಲಿಗೆ ಹೋದೆವು. ಆರೋಪಿಯು ಭಾರತ ಗ್ಯಾಸ್ ಏಜೆನ್ಸಿ ಬಳಿ ನಿಂತಿದ್ದರು. ನಾವು ಪರಸ್ಪರ ಅಂಗ ಶೋಧನೆ ಮಾಡಿಕೊಂಡ ಬಗ್ಗೆ ವಿಡಿಯೋ ಮಾಡಿಲ್ಲ. ಆರೋಪಿಯ ಅಂಗ ಶೋಧನೆ ಮಾಡಿದ ಬಗ್ಗೆ ವಿಡಿಯೋ ಮಾಡಿಲ್ಲ. ಆ ಸ್ಥಳದ ಸುತ್ತಮುತ್ತಲೂ 100-200 ಮನೆಗಳು ಇವೆ ಅಂದರೆ ನಿಜ. ಸಾಕ್ಷಿದಾರರು ಆ ಸ್ಥಳದ ಪಕ್ಕದಲ್ಲಿ ಯಾವುದೇ ಮನೆ ಇಲ್ಲ. ದೂರಿನಲ್ಲಿ ನಾನು ಭಾರತ ಗ್ಯಾಸ್ ಏಜೆನ್ಸಿ ಆ ದಿನ ಬಂದ್ ಆಗಿತ್ತೋ ನಡೆಯುತ್ತಿತ್ತೋ ಅಂತ ನಮೂದು ಮಾಡಿಲ್ಲ. ಮಾಹಿತಿ ಬಂದ ಸ್ಥಳ ಜನನಿಬೀಡ ಪ್ರದೇಶ ಅಂದರೆ ನಾವು ಹೋದ ಸಮಯದಲ್ಲಿ ಸಾರ್ವಜನಿಕರು ಯಾರು ಇರಲಿಲ್ಲ. ನಾವು ಹೋದಾಗ ಸ್ಥಳದಲ್ಲಿ ಆರೋಪಿ ಒಬ್ಬನೇ ನಿಂತಿದ್ದ ಅಂತ ನಾವು ದೂರಿನಲ್ಲಿ ತಿಳಿಸಿಲ್ಲ. ಘಟನೆಯ ಸ್ಥಳದ ಸುತ್ತಮುತ್ತಲಿನಲ್ಲಿ ಕಾಲೇಜು, ಹಾಸ್ಟೇಲ್, ಶಾಲೆ ಇರುವುದಿಲ್ಲ. ಅಂಗ ಶೋಧನೆ ಅಲ್ಲೇ ಮಾಡಬೇಕಾ ಅಥವಾ ಪತ್ರಾಂಕಿತ ಅಧಿಕಾರಿಗಳ ಮುಂದೆ ಮಾಡಬೇಕಾ ಅಥವಾ ನ್ಯಾಯಾಧೀಶರ ಮುಂದೆ ಮಾಡಬೇಕಾ ಅಂತ ಕೇಳಿದಾಗ ಆರೋಪಿ ಅಲ್ಲೇ ಮಾಡಬೇಕು ಅಂತ ಹೇಳಿದ ವಿಷಯವನ್ನು ದೂರಿನಲ್ಲಿ ನಮೂದು ಮಾಡಿಲ್ಲ. ಆರೋಪಿಗೆ ಮೌಖಿಕವಾಗಿ ತಿಳಿಸಿದ ಬಗ್ಗೆ ನೋಟಿಸ್ಸಿನಲ್ಲಿ ನಮೂದು ಮಾಡಿಲ್ಲ.

4. ಆ ಜಾಗ ಎಲ್ಲಾ ಈಗ ಗಾರ್ಡನ್ ಮಾಡಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಗಾಂಜಾಗಳು ಇದ್ದ ಬಗ್ಗೆ ಕುರುಹುಗಳು ಯಾವವು ಅಂದರೆ ಅದರ ಮಾದರಿಯನ್ನು ತೆಗೆದುಕೊಂಡಿಲ್ಲ. ಭಾತಿ ಗುಡ್ಡ ಕಾಡು ಪ್ರದೇಶ ಅಂದರೆ ನಿಜ. ನಮ್ಮ ಠಾಣೆಯಲ್ಲಿ ಗಾಂಜಾ ಪ್ರಕರಣ ದಾಖಲಾಗಿದ್ದು ಆರೋಪಿಯನ್ನು ವಿನಾಃ ಕಾರಣ ಈ ಪ್ರಕರಣದಲ್ಲಿ ಸಿಕ್ಕಿಸಿದ್ದೇವೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.